## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 726 /2023

**ಸಾಕ್ಷಿಯನ್ನು ದಿಃ 04.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | |
|---|---|---|
| ಹೆಸರು | ರಾಜೇಶ್ವರಿ | ಡಿ.ಡಬ್ಲ್ಯೂಃ 1 |
| ಗಂಡನ ಹೆಸರು | ನಾಗರಾಜು | |
| ವಯಸ್ಸು | 40 ವರ್ಷ | |
| ಕೆಲಸ | ಬ್ಯೂಟಿಷಿಯನ್ | |
| ವಾಸಸ್ಥಳ | ಮಂಜುನಾಥ ಬಡಾವಣೆ,<br>ಹುಣಸೂರು | |

## ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ.MRH ವಕೀಲರಿಂದ

ನನಗೆ ಫಿರ್ಯಾದುದಾರರು ಗೊತ್ತು. ನನ್ನ ತಾಯಿ ಮಹದೇವಮ್ಮ ಮತ್ತು ಫಿರ್ಯಾದುದಾರರು ಜಿಲ್ಲಾ ಪಂಚಾಯ್ತಿ ಕಚೇರಿಯಲ್ಲಿ ಒಟ್ಟಿಗೆ ಕೆಲಸ ಮಾಡುತ್ತಿದ್ದರು. ಆ ಮೂಲಕ ನನಗೆ ಫಿರ್ಯಾದುದಾರರು ಪರಿಚಯ. ನನ್ನ ತಾಯಿ ಮತ್ತು ಫಿರ್ಯಾದುದಾರರ ಮಧ್ಯೆ ರೂ. 5 ಸಾವಿರದಿಂದ 10 ಸಾವಿರದ ಸಣ್ಣ-ಪುಟ್ಟ ಹಣಕಾಸಿನ ವ್ಯವಹಾರ ಇತ್ತು. ನಾನು ಫಿರ್ಯಾದುದಾರರಿಂದ ರೂ. 5 ಸಾವಿರದಿಂದ ರೂ.10 ಸಾವಿರವರೆಗೆ ಸಾಲ ಪಡೆದುಕೊಳ್ಳುತ್ತಿದ್ದೆ ಮತ್ತು ಅದನ್ನು ವಾಪಸ್ಸು ಮಾಡುತ್ತಿದ್ದೆ. ನಾನು ಸದರಿ ವ್ಯವಹಾರದ ಸಲುವಾಗಿ ಫಿರ್ಯಾದುದಾರರಿಗೆ ಖಾಲಿ ಚೆಕ್ಕನ್ನು ಭದ್ರತೆಗಾಗಿ ಕೊಟ್ಟಿದ್ದೆ. ನಾನು ಫಿರ್ಯಾದುದಾರರಿಂದ ಪಡೆದುಕೊಂಡ ಸಾಲದ ಹಣವನ್ನು ಪೂರ್ತಿ ವಾಪಸ್ಸು ಮಾಡಿದ್ದೇನೆ. ಚೆಕ್ಕನ್ನು ವಾಪಸ್ಸು ಕೊಡುವಂತೆ ನಾನು ಪದೇ ಪದೇ ಹೋಗಿ ಫಿರ್ಯಾದುದಾರರ ಬಳಿ ಕೇಳಿದ್ದೆ. ಎಲ್ಲಿಯೋ ಕಳೆದು ಹೋಗಿದೆ ತಲುಪಿಸುತ್ತೇನೆ ಎಂದು ಫಿರ್ಯಾದುದಾರರು ನನಗೆ ಹೇಳಿದರು. ನನ್ನ ಮನೆಯ ವಿಳಾಸಕ್ಕೆ ಫಿರ್ಯಾದುದಾರರು ನೋಟೀಸ್ ಕೊಟ್ಟರು. ನಾನು ಫೋನ್ ಮಾಡಿ ಅವರನ್ನು ವಿಚಾರಿಸಿದೆ ಅದಕ್ಕೆ ಫಿರ್ಯಾದುದಾರರು ಮನೆಗೆ ಬಂದು ಮಾತನಾಡುತ್ತೇನೆ ಎಂದು ಹೇಳಿ 2-3 ಬಾರಿ ಮನೆಗೆ ಬಂದರು. ಫಿರ್ಯಾದುದಾರರು ರೂ.4 ಲಕ್ಷಕ್ಕೆ ನನಗೆ ನೋಟೀಸ್ ಕೊಟ್ಟಿದ್ದಾರೆ. ನಾನು

ಫಿರ್ಯಾದುದಾರರಿಂದ ರೂ.4 ಲಕ್ಷ ಸಾಲ ಪಡೆದುಕೊಂಡಿಲ್ಲ. ನೋಟೀಸ್ ಸ್ವೀಕರಿಸಿದರೂ ಸಹ ಯಾಕೆ ಉತ್ತರ ಕೊಟ್ಟಿಲ್ಲ ಎಂದರೆ ಫಿರ್ಯಾದುದಾರರು ಮನೆಗೆ ಬಂದಾಗ ನಾನು ಹಣ ತೀರಿಸಿದರೂ ಸಹ ಯಾಕೆ ನೋಟೀಸ್ ಕೊಟ್ಟಿದ್ದಿರಿ ಎಂದು ಕೇಳಿದಾಗ ಅದನ್ನು ಮುಂದುವರಿಸುವುದಿಲ್ಲ ಎಂದು ಹೇಳಿದ್ದರಿಂದ ನಾನು ಉತ್ತರದ ನೋಟೀಸ್ ಕೊಟ್ಟಿಲ್ಲ. ಈ ಪ್ರಕರಣವನ್ನು ಯಾವ ಕಾರಣಕ್ಕಾಗಿ ನನ್ನ ವಿರುದ್ಧ ದಾಖಲಿಸಿದ್ದಾರೆ ಎಂದು ಗೊತ್ತಿಲ್ಲ.

ನಾನು ಹುಣಸೂರಿನ ವಿಶಾಲ್ ಮಾರ್ಟ್ ಎದುರುಗಡೆ ಬ್ಯೂಟಿಷಿಯನ್ ಆಗಿ ಕೆಲಸ ಮಾಡುತ್ತೇನೆ. ನನ್ನ ಆ ವಿಳಾಸಕ್ಕೆ ಫಿರ್ಯಾದುದಾರರು ನೋಟೀಸ್ ಕಳುಹಿಸಿಲ್ಲ. ನಾನು ಫಿರ್ಯಾದುದಾರರೊಂದಿಗೆ ರೂ.4 ಲಕ್ಷ ಮೊತ್ತದ ಹಣಕಾಸಿನ ವ್ಯವಹಾರ ಮಾಡದೇ ಇದ್ದರೂ ಕೂಡ ನನ್ನ ವಿರುದ್ಧ ಈ ಪ್ರಕರಣವನ್ನು ದಾಖಲಿಸಿದ್ದು ಅದರಿಂದ ಬಿಡುಗಡೆ ಮಾಡಬೇಕು ಎಂದು ಪ್ರಾರ್ಥಿಸುತ್ತೇನೆ. ನಾನು ಫಿರ್ಯಾದುದಾರರಿಂದ ನನ್ನ ಗೃಹಕೃತ್ಯದ ಅಡಚಣೆಗಾಗಿ ರೂ.4 ಲಕ್ಷ ಸಾಲ ಪಡೆದುಕೊಂಡಿಲ್ಲ. ನಾನು ರೂ. 5 ಸಾವಿರದಿಂದ 10 ಸಾವಿರ ಹಣದ ವ್ಯವಹಾರದ ಭದ್ರತೆಗಾಗಿ ನೀಡಿದ ಚೆಕ್ಕನ್ನು ರೂ.4 ಲಕ್ಷಕ್ಕೆ ಫಿರ್ಯಾದುದಾರರು ಹಾಜರುಪಡಿಸಿದ್ದಾರೆ. ನನಗೆ ಗೃಹಕೃತ್ಯಕ್ಕಾಗಲೀ, ಬೇರೆ ವ್ಯವಹಾರಕ್ಕಾಗಲೀ ಹಣದ ಅವಶ್ಯಕತೆ ಇಲ್ಲ.

ಪಾಟೀ ಸವಾಲುಃ ದೂರುದಾರರ ಪರ ಶ್ರೀ **AKN** ಪರ ಶ್ರೀ. **SDS** ವಕೀಲರಿಂದಃ-
ಕಾಲಾವಕಾಶ ಕೋರಿದ್ದು, ಕೋರಿಕೆ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.